## ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಗೊಂಡ ಉಪನ್ಯಾಸಕರು ಗಳಗೆ ಸ್ಥಳನಿಯುಕ್ತಿಗೊಳಸುವ ಬಗ್ಗೆ.

ಉಲ್ಲೇಖ:
1. ದಿನಾಂಕ: 25-08-2006, ಸಂಖ್ಯೆ: ಕಾಶಿಇ 34 ಬೋಹುಸ್ರ 2004(2) ಸಿವಿ1ರ ಇಲಾಖೆಯ ಪ್ರಸ್ತಾವನೆ.
2. ದಿನಾಂಕ: 01-09-2006, ಸಂಖ್ಯೆ: ಇಡಿ 74 ಡಿಸಿಇ 2006 ಸರ್ಕಾರದ ಪ್ರಸ್ತಾವನೆ.
3. ದಿನಾಂಕ:12-06-2007, ಸಂಖ್ಯೆ: ಪಿಎಸ್‌ಸಿ 54 ಆರ್‌ಟಿಬಿ 2006ರ ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ
4. ದಿನಾಂಕ:13-11-2007, ಸಂಖ್ಯೆ:ಇಡಿ 118 ಡಿಸಿಇ 2007ರ ಸರ್ಕಾರದ ನೇಮಕಾತಿ ಅಧಿಸೂಚನೆ.
5. ದಿನಾಂಕ: 14-11-2007, ಸಂಖ್ಯೆ: ಕಾಶಿಇ 34 ಬೋಹುಸ್ರ 2004(3) ಸಿವಿ1ರ ಇಲಾಖೆಯ ಕೌನ್ಸಿಲಿಂಗ್ ಸೂಚನಾ ಪತ್ರ.
6. ದಿನಾಂಕ:9-10-07,ಸಂಖ್ಯೆ:ಇಡಿ/74/ಡಿಸಿಇ/2006(ಭಾ)ಸರ್ಕಾರದ ಪತ್ರ.

*****

**ಪ್ರಸ್ತಾವಿಕ ವಿವರಗಳು:**

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇದ್ದ 610 ಉಪನ್ಯಾಸಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ (1)ರಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದರಂತೆ ಉಲ್ಲೇಖ(3)ರ ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆಯಲ್ಲಿ ಪ್ರಾಣಿಶಾಸ್ತ್ರ ವಿಷಯದಲ್ಲಿ ಆಯ್ಕೆಗೊಂಡ ಉಪನ್ಯಾಸಕರುಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಉಲ್ಲೇಖ (4)ರ ಸರ್ಕಾರಿ ಅಧಿಸೂಚನೆಯಲ್ಲಿ ರೂ.8000-275-13500ರ ಯುಜಿಸಿ ವೇತನ ಶ್ರೇಣಿಯಲ್ಲಿ ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ. ಅದರಂತೆ ಆಯ್ಕೆಗೊಂಡ ಅಭ್ಯರ್ಥಿಗಳಗೆ ಉಲ್ಲೇಖ(5)ರ ರೀತ್ಯ ಸ್ಥಳನಿಯುಕ್ತಿಗೆ ಕೌನ್ಸಿಲಿಂಗ್ ನಡೆಸಲಾಗಿದ್ದು ಅದರಂತೆ ಅಭ್ಯರ್ಥಿಗಳು ವೈಯಕ್ತಿಕವಾಗಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಕಾಲೇಜಿಗೆ ಉಲ್ಲೇಖ (6)ರ ಸರ್ಕಾರದ ಪತ್ರದ ಅನುಮತಿ ಮೇರೆಗೆ, ನೇಮಕಾತಿ ಹೊಂದಿದ ಅಭ್ಯರ್ಥಿಗಳಗೆ ಸ್ಥಳನಿಯುಕ್ತಿಗೊಳಸಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ 34 ಬೋಹುಸ್ರ 2004(3) ಸಿವಿ1, ಬೆಂಗಳೂರು, ದಿನಾಂಕ:10-12-2007**

ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಖಾಲಿ ಇರುವ ಪ್ರಾಣಿಶಾಸ್ತ್ರ ಉಪನ್ಯಾಸಕರ ಹುದ್ದೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಆಯ್ಕೆಗೊಂಡ ಈ ಕೆಳಕಾಣಿಸಿದ ಉಪನ್ಯಾಸಕರಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಕಾಲೇಜು ಮತ್ತು ಸ್ಥಳಕ್ಕೆ ಸ್ಥಳನಿಯುಕ್ತಿಗೊಳಸಲಾಗಿದೆ.

| ಸರ್ಕಾರಿ ಅಧಿಸೂಚನೆ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಸ್ಥಳನಿಯುಕ್ತಿಗೊಳಸಲಾದ ಕಾಲೇಜು ಮತ್ತು ಸ್ಥಳ | ಷರಾ |
|---|---|---|---|
| 17 | ಬಾಲಸುಬ್ರಮಣ್ಯಂ, ಎಂ.ವಿ.<br>ನಂ.38, 6ನೇ "ಎ" ಕ್ರಾಸ್,<br>ಕೆ.ಹೆಚ್.ಬಿ.ಕಾಲೋನಿ,<br>ಗಾಂಧಿನಗರ ಬಡಾವಣೆ,<br>ಯಲಹಂಕ,<br>ಬೆಂಗಳೂರು-560064 | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು | ಖಾಲಿ ಹುದ್ದೆಗೆ ಎದುರಾಗಿ |

ವಿ.ಸೂ: *ಉಲ್ಲೇಖ (4) ಸಂಖ್ಯೆ: ಇಡಿ 118 ಡಿಸಿಇ 2007, ದಿನಾಂಕ:13-11-2007ರ ಸರ್ಕಾರಿ ಅಧಿಸೂಚನೆಯ ಎಲ್ಲಾ ಷರತ್ತುಗಳು ಅನ್ವಯಿಸುವುದು.*

Jayanthi
ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:
1. ಮೇಲ್ಕಾಣಿಸಿದ ಅಭ್ಯರ್ಥಿಗೆ (ನೋಂದಣಿ, ಸ್ವೀಕೃತಿ ಅಂಚೆ ಮೂಲಕ).

ಪ್ರಾಂಶುಪಾಲರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಬೆಂಗಳೂರು

34-Posting Zoology.Skumar

2. ಪ್ರಾಂಶುಪಾಲರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು – ತಮ್ಮ ಕಾಲೇಜಿಗೆ ಸ್ಥಳನಿಯುಕ್ತಿಗೊಳಸಲಾದ ಅಭ್ಯರ್ಥಿಯನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳುವ ಮೊದಲು ಶೈಕ್ಷಣಿಕ ಅರ್ಹತಾ ಅಂಕ ಪಟ್ಟಿ, ಜಾತಿ ಪ್ರಮಾಣಪತ್ರದ ಮೂಲ ದಾಖಲಾತಿಗಳನ್ನು ***ಕಡ್ಡಾಯವಾಗಿ*** ಪರಿಶೀಲಿಸತಕ್ಕದ್ದು ಹಾಗೂ ಇತ್ತೀಚಿನ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆಯಲಾದ ನಡತೆ ಪ್ರಮಾಣಪತ್ರಗಳನ್ನು ಪರಿಶೀಲಿಸಿ ಪಡೆಯತಕ್ಕದ್ದು. ಮೂಲ ದಾಖಲಾತಿಗಳನ್ನು ಪರಿಶೀಲಿಸಿ, ಕರ್ತವ್ಯಕ್ಕೆ ಹಾಜರುಪಡಿಸಿಕೊಂಡ ಬಗ್ಗೆ ಪ್ರತ್ಯೇಕವಾಗಿ ಸರ್ಕಾರ ಹಾಗೂ ಇಲಾಖೆಗೆ ವರದಿಯನ್ನು ದೃಢೀಕೃತ ದಾಖಲಾತಿಗಳ ಪ್ರತಿಗಳೊಂದಿಗೆ ಕಳುಹಿಸಲು ಸೂಚಿಸಲಾಗಿದೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು
4. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಪಾರ್ಕ್ ಹೌಸ್, ಬೆಂಗಳೂರು
5. ಅಧೀಕ್ಷಕರು, ಸಿಬ್ಬಂದಿ ವಿಭಾಗ-2, 5, ಯೋಜನೆ, ಆಯವ್ಯಯ ಮತ್ತು ಹಣ ಪಾವತಿ ವಿಭಾಗಗಳು, ಕೇಂದ್ರ ಕಛೇರಿ, ಬೆಂಗಳೂರು
6. ರಕ್ಷಕ ಕಡತ
7. ಕಛೇರಿ ಪ್ರತಿ.